# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-250/2017/ಡಿಆರ್‌ಇ-1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ: 29/08/2017
30/8

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(3) ರನ್ವಯ ವರದಿ

ವಿಷಯ: ಶ್ರೀ.ಜಿ.ಮಂಜುನಾಥ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಬಾವಿಕೆರೆ, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ, - ಇವರು ಕರ್ತವ್ಯಲೋಪ ಎಸಗಿರುವ ಬಗ್ಗೆ ಇವರ ವಿರುದ್ಧದ ನಡವಳಿ ಕುರಿತು.

******

1) ಶ್ರೀ.ಎನ್.ರಾಜೇಶ್ ಶೆಟ್ಟಿ ಬಿನ್ ಕೆ.ನಾಗರಾಜ ಶೆಟ್ಟಿ, ವ್ಯವಸಾಯಗಾರರು, ಬಾವಿಕೆರೆ, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು ಶ್ರೀ.ಜಿ.ಮಂಜುನಾಥ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಬಾವಿಕೆರೆ, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2) ದೂರುದಾರರು ತಮ್ಮ ದೂರಿನಲ್ಲಿ ಶ್ರೀ.ಮಂಜುನಾಥ್ ಇವರು ಬಾವಿಕೆರೆ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ 1986-87ನೇ ಸಾಲಿನಲ್ಲಿ ಮಾರಾಟ ಗುಮಾಸ್ತರಾಗಿ ಸೇರಿದ್ದು, ನಂತರ ಅವರನ್ನು ಸಹಕಾರ ಸಂಘದ ಕಾರ್ಯದರ್ಶಿಯಾಗಿ ನೇಮಕ ಮಾಡಿರುತ್ತಾರೆ. ಕಾರ್ಯದರ್ಶಿ ಹುದ್ದೆಯನ್ನು ಈಗ ಸಿ.ಇ.ಓ ಆಗಿ ಮಾರ್ಪಾಡು ಮಾಡಲಾಗಿದೆ. ಸಂಘದಲ್ಲಿ ಹಣ ದುರುಪಯೋಗ ಮಾಡಿಕೊಂಡಿರುವ ಬಗ್ಗೆ ಡಿ.ಸಿ.ಸಿ.ಬ್ಯಾಂಕ್ ಮೇಲ್ವಿಚಾರಕರು ಲೆಕ್ಕ ಪರಿಶೋಧನೆ ಮಾಡಿದಾಗ ರೂ.10,61,500/- ದುರುಪಯೋಗವಾಗಿರುವುದು ಕಂಡುಬಂದಿದ್ದು, ಆ ವಿಚಾರವಾಗಿ ಎದುರುದಾರರ ವಿರುದ್ಧ ಲಕ್ಕವಳ್ಳಿ ಪೊಲೀಸ್ ಠಾಣೆಯಲ್ಲಿ ಅಪರಾಧ ಸಂ.88/2013 ರಂತೆ ದಾಖಲಾಗಿರುತ್ತದೆ. ಎದುರುದಾರರು ಹಣ ದುರುಪಯೋಗ ಮಾಡಿರುವ ಬಗ್ಗೆ 2015-16ನೇ ಸಾಲಿನಲ್ಲಿ ಆಡಳಿತ ಮಂಡಳಿಯವರು ಅವರನ್ನು ದಿ.10/1/16 ರಿಂದ 14.1.16 ರ ವರೆಗೆ ಅಮಾನತ್ತು ಮಾಡಿದ್ದು, ಇನ್ನುಮುಂದೆ ಯಾವುದೇ ತಪ್ಪು ಮಾಡುವುದಿಲ್ಲವೆಂದು ಆಡಳಿತ ಮಂಡಳಿಯ ಮುಂದೆ ತಪ್ಪು ಒಪ್ಪಿಕೊಂಡು ಛಾಪಾ ಕಾಗದದಲ್ಲಿ ಬರೆದುಕೊಟ್ಟಿರುತ್ತಾರೆ. ಆದರೂ ಸಹ ಈ ಹಿಂದೆ ನಡೆದಂತಹ ತಪ್ಪುದಾರಿಯಲ್ಲಿ ನಡೆದು ಸಂಘಕ್ಕೆ ನಷ್ಟವನ್ನುಂಟುಮಾಡಿರುತ್ತಾರೆ. ಸದರಿ ವಿಚಾರಗಳ ಬಗ್ಗೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ತರೀಕೆರೆ ಇವರು ಯಾವುದೇ ಕ್ರಮವನ್ನು

ಕೈಗೊಂಡಿರುವುದಿಲ್ಲ. ಆದ್ದರಿಂದ, ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರಿ ಈ ದೂರನ್ನು ಸಲ್ಲಿಸಿರುತ್ತಾರೆ.

3) ದೂರುದಾರರ ದೂರಿನ ಮೇಲೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ಎದುರುದಾರರಿಗೆ ಆದೇಶಿಸಲಾಗಿತ್ತು. ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ಆಕ್ಷೇಪಣೆಯಲ್ಲಿ ಶ್ರೀ.ಬಿ.ಆನಂದ ಮತ್ತು ಶ್ರೀ.ಕೃಷ್ಣಮೂರ್ತಿ, ಮಾರಾಟ ಗುಮಾಸ್ತರು ಸಂಘದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ, ಹಣ ದುರುಪಯೋಗ ಪಡಿಸಿಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ, ಹಣ ಮರುಪಾವತಿಸುವಂತೆ ಸಂಬಂಧಪಟ್ಟವರಿಗೆ ನೋಟೀಸು ನೀಡಿರುತ್ತಾರೆ. ನೋಟೀಸು ನೀಡಿದರೂ ಸಹ ಮರು ಪಾವತಿಸದಿದ್ದಾಗ, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ತರೀಕೆರೆ ಇವರಿಗೆ ವರದಿ ಸಲ್ಲಿಸಿದ್ದು, ಅವರು ಪರಿಶೀಲಿಸಿ ವರದಿ ಸಲ್ಲಿಸುವಂತೆ ಸಹಕಾರ ಅಭಿವೃದ್ಧಿ ಅಧಿಕಾರಿ, ಕಡೂರು ಇವರಿಗೆ ಆದೇಶಿಸಿರುತ್ತಾರೆ. ಸಹಕಾರ ಅಭಿವೃದ್ಧಿ ಅಧಿಕಾರಿಯವರು ಸಲ್ಲಿಸಿದ ವರದಿಯಲ್ಲಿ ರೂ.6,14,856/- ತಾತ್ಕಾಲಿಕ ಹಣ ದುರುಪಯೋಗವಾಗಿದ್ದು, ಆ ಪೈಕಿ ರೂ.3,63,970/- ಕೃಷ್ಣಮೂರ್ತಿಯವರಿಂದ ಜಮಾ ಬಂದಿದ್ದು ಉಳಿಕೆ ರೂ.2,50,886/- ಆನಂದ್‌ರವರಿಂದ ವಸೂಲಾತಿ ಆಗಬೇಕಾಗಿರುತ್ತದೆ. ಈ ಬಗ್ಗೆ ಆನಂದ್‌ರವರ ವಿರುದ್ಧ ಸಹಾಯಕ ನಿಬಂಧಕರ ನ್ಯಾಯಾಲಯದಲ್ಲಿ ಕಲಂ 69 ರಡಿಯಲ್ಲಿ ದಾವೆ ದಾಖಲಿಸಿದ್ದು, ವಿಚಾರಣಾ ಹಂತದಲ್ಲಿ ಆನಂದ್‌ರವರು ದುರುಪಯೋಗದ ಮೊತ್ತವನ್ನು ಪಾವತಿ ಮಾಡಿರುವುದರಿಂದ ಪ್ರಕರಣ ವಜಾಗೊಂಡಿರುತ್ತದೆ. ಸಂಘದ ಲೆಕ್ಕ ಪರಿಶೋಧನೆಯಲ್ಲಿಯೂ ಸಹ ಆನಂದ್‌ರವರಿಂದ ಮಾತ್ರ ದುರುಪಯೋಗವೆಂದು ಕಂಡುಬಂದಿದ್ದು, ಬೇರೆ ಯಾವುದೇ ದುರುಪಯೋಗ ಇರುವುದಿಲ್ಲ. ಸಂಘದ ಅಧ್ಯಕ್ಷರಾದ ರಾಜೇಶ್‌ರವರು ರಾಜಕೀಯ ಉದ್ದೇಶದಿಂದ ಅವರ ವಿರುದ್ಧ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಿರುತ್ತಾರೆ. ಗೊಬ್ಬರ ಮಾರಾಟದ ಬಗ್ಗೆ ಹಣವನ್ನು ಸಂಘಕ್ಕೆ ಜಮಾ ಮಾಡಿರುವುದರಿಂದ, ಸದರಿ ಆರೋಪದಲ್ಲಿ ಯಾವುದೇ ಸತ್ಯಾಂಶವಿಲ್ಲ. ಯಾವುದೇ ನಕಲಿ ಸಹಿಯನ್ನು ಮಾಡಿರುವುದಿಲ್ಲ. ಅಶ್ವಿನಿ ಟ್ರೇಡರ್ಸ್ ಚಿಕ್ಕಮಗಳೂರು ಇವರಿಂದ ಒಟ್ಟು 300 ಚೀಲ ಗೊಬ್ಬರ ಬಂದಿದ್ದು, ಮಾರಾಟ ಗುಮಾಸ್ತರಾದ ಎಂ.ಶ್ರೀಕಾಂತ್‌ರವರು ಡೆಲಿವರಿ ಚಲನ್‌ಗಳಿಗೆ ಸಹಿ ಮಾಡಿ ಗೊಬ್ಬರ ಪಡೆದಿರುತ್ತಾರೆ. ಮಾರಾಟಗಾರರ ಮುದ್ರೆಯ ಬದಲಾಗಿ ವ್ಯವಸ್ಥಾಪಕರ ಮುದ್ರೆಯನ್ನು ಮಾರಾಟ ಗುಮಾಸ್ತರು ಒತ್ತಿರುತ್ತಾರೆ. ಈ ಬಗ್ಗೆ ಈಗಾಗಲೇ ಇಲಾಖಾ ವತಿಯಿಂದ ಹಾಗೂ ಜಿಲ್ಲಾ ಬ್ಯಾಂಕ್ ಮೇಲ್ವಿಚಾರಕರ ಸಮಕ್ಷಮದಲ್ಲಿ ತನಿಖೆಯನ್ನು ನಡೆಸಲಾಗಿದ್ದು, ಮಾರಾಟಗಾರರಾದ ಎಂ.ಶ್ರೀಕಾಂತ್‌ರವರು ದೂರುದಾರರಾದ ರಾಜೇಶ್‌ರವರ ಸಮಕ್ಷಮದಲ್ಲಿ ಒಪ್ಪಿಕೊಂಡಿರುತ್ತಾರೆ. ಗೊಬ್ಬರ ಸಗಟುದಾರರಿಗೆ ಬ್ಯಾಂಕ್ ಮುಖೇನ ಹಣ ವರ್ಗಾವಣೆ ಮಾಡಿರುವುದರಿಂದ, ರೂ.2,02,500/- ವ್ಯವಹಾರ ಸಂಸ್ಥೆಯಿಂದ ನಕಲಿಯಾಗಿರುತ್ತದೆಯೆಂಬುದು ಸುಳ್ಳು ಆರೋಪವಾಗಿರುತ್ತದೆ. ಸಾಲ ಮನ್ನಾ ವಹಿಯಲ್ಲಿ ಸದಸ್ಯರಿಗೆ ಮೋಸ ಮಾಡಿರುತ್ತಾರೆಂಬ ಆಪಾದನೆ ಸುಳ್ಳು ಆಪಾದನೆಯಾಗಿರುತ್ತದೆ. ಸಂಘದ 201 ರಿಂದ 400 ವರೆಗಿನ ರಸೀದಿ ಪುಸ್ತಕಗಳನ್ನು ನಗದು ಗುಮಾಸ್ತರು ಕಳೆದು ಹೋಗಿದೆಯೆಂದು ತಿಳಿಸಿದ್ದು, ಆದ್ದರಿಂದ, ಅದನ್ನು ಲೆಕ್ಕ ಪರಿಶೋಧನಾ ಸಂದರ್ಭದಲ್ಲಿ ಹಾಜರು ಪಡಿಸಲು ಆಗಿರುವುದಿಲ್ಲ. ಸದಸ್ಯರಿಗೆ ನೀಡಿದ್ದ ರಸೀದಿ ರೀತ್ಯ ನಗದು ಗುಮಾಸ್ತರಿಂದ ಹಣ ವಸೂಲಾತಿ ಮಾಡಿ ಜಮಾ ಪಡೆಯಲಾಗಿರುತ್ತದೆ. ಈ ಬಗ್ಗೆ ಆಡಿಟ್‌ನಲ್ಲಿ ಯಾವುದೇ ವ್ಯತ್ಯಾಸ

ಕಂಡುಬಂದಿರುವುದಿಲ್ಲ. ಸಂಘಕ್ಕೆ ವಾಪಸ್ಸು ಕಟ್ಟಿರುವ ಸಾಲದ ಹಣದ ಬಗ್ಗೆ ಜಮಾ ಪಡೆಯುವುದನ್ನು ತಡೆಹಿಡಿದು ಹಣವನ್ನು ಅವರ ಬಳಿಯೇ ಇಟ್ಟುಕೊಳ್ಳಲು ಸಾಲಗಾರರು ಹೇಳಿದ್ದರಿಂದ ರಸೀದಿಯನ್ನು ರದ್ದುಪಡಿಸಿದ್ದು, ಆದರೆ ನಗದು ಪುಸ್ತಕಕ್ಕೆ ಜಮಾ ಪಡೆದುಕೊಂಡಿರುವುದಿಲ್ಲ. ಈ ಬಗ್ಗೆ ಆಡಳಿತ ಮಂಡಳಿ ಸದಸ್ಯರು ಆಕ್ಷೇಪಣೆ ವ್ಯಕ್ತಪಡಿಸಿರುವುದರಿಂದ ಮೊತ್ತವನ್ನು ಬಡ್ಡಿ ಸಮೇತ ಮರು ಪಾವತಿಸಿ ರಸೀದಿ ನೀಡಿರುತ್ತಾರೆ. ಲಾಭ ವಿಲೇವಾರಿ ಮಾಡುವಾಗ ನೌಕರರ ಬೋನಸ್ ನೀಡಲು ವಾರ್ಷಿಕ ಮಹಾಸಭೆಯಲ್ಲಿ ಅನುಮೋದನೆ ಪಡೆಯಲಾಗಿದ್ದು, ಸಂಘದ ಉಪ ನಿಯಮದ ರೀತ್ಯ 2 ತಿಂಗಳ ವೇತನವನ್ನು ಪಡೆಯಲು ಅವಕಾಶವಿದ್ದು, ಅದರ ರೀತ್ಯ ಬೋನಸ್ ಪಡೆದಿರುತ್ತಾರೆ. ದೂರುದಾರರು 2010 ರಿಂದ 2016ನೇ ಸಾಲಿನವರೆಗೆ ಸಂಘದಲ್ಲಿ ಆಡಳಿತ ಮಂಡಳಿ ನಿರ್ದೇಶಕರಾಗಿ ಹಾಗೂ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದು, ಎಲ್ಲಾ ಸಾಲಿನ ಸಂಘದ ಆರ್ಥಿಕ ತಃಖ್ತೆಗಳಿಗೆ ಅವರೂ ಸಹ ಒಪ್ಪಿ ಸಹಿ ಮಾಡಿ ಅನುಮೋದಿಸಿರುತ್ತಾರೆಂದು ಹೇಳಿರುತ್ತಾರೆ.

4) ಎದುರುದಾರರ ಆಕ್ಷೇಪಣೆಯ ಮೇಲೆ ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಪ್ರತ್ಯುತ್ತರದಲ್ಲಿ ಎದುರುದಾರರು ಕೆಲವು ದಾಖಲೆಗಳನ್ನು ಸ್ವತಃ ತಯಾರಿಸಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದ್ದು, ನಕಲಿ ದಾಖಲೆಗಳನ್ನು ಸೃಷ್ಟಿ ಮಾಡಿ ಕೆಲವು ದಾಖಲೆಗಳನ್ನು ನೀಡಿರುತ್ತಾರೆ. ವಿಚಾರಣೆಯ ಸಮಯದಲ್ಲಿ ಆಡಳಿತ ಮಂಡಳಿಯ ವಾಸಿಕ ಸಭೆಯ ನಡವಳಿ ಪುಸ್ತಕಗಳನ್ನು ಸಂಪೂರ್ಣವಾಗಿ ಪರಿಶೀಲಿಸಬೇಕಾಗುತ್ತದೆ. ಮಂಜುನಾಥ್‌ರವರು ಉತ್ತರಕ್ಕೆ ನೀಡಿರುವ ಪ್ರತ್ಯುತ್ತರದ ಪುಟ ಸಂ.1 ರಿಂದ 3 ರವರೆಗೆ ಕಾಣಿಸಿದಂತೆ ಬಿ.ಡಿ.ಆನಂದರಾವ್‌ರವರ ಜೊತೆಯಲ್ಲಿ ಭಾಗಿಯಾಗಿ ಸಂಘಕ್ಕೆ ತುಂಬಾ ಮೋಸವನ್ನು ಮತ್ತು ನಷ್ಟವನ್ನು ಉಂಟು ಮಾಡಿರುತ್ತಾರೆ. 2011-12ರ ವಾರ್ಷಿಕ ಲೆಕ್ಕ ಪರಿಶೋಧನಾ ಸಮಯಲ್ಲಿ ಸಹಕಾರ ಸಂಸ್ಥೆಯ ಹಣದಲ್ಲಿ ವ್ಯತ್ಯಾಸ ಬಂದಿದ್ದು, ಅದಕ್ಕೆ ನಾನೇ ಜವಾಬ್ದಾರನೆಂದು ಬಿ.ವಿ.ಆನಂದ್, ಆರ್.ಕೆ.ಕೃಷ್ಣಮೂರ್ತಿ ಮತ್ತು ಜಿ.ಮಂಜುನಾಥ್ ಇವರು ಬಾಂಡ್ ಪೇಪರ್‌ನಲ್ಲಿ ಬರೆದು ಸಹಿ ಮಾಡಿ ಕೊಟ್ಟಿರುತ್ತಾರೆ ಹಾಗೂ ಅವರು ಬಳಸಿಕೊಂಡ ಹಣವನ್ನು ಹಂತಹಂತವಾಗಿ ಸಂಘಕ್ಕೆ ಪಾವತಿ ಮಾಡಿರುತ್ತಾರೆ. ನಾರಾಯಣ ನಾಯ್ಕರ್‌ರವರು ಕೂಲಂಕುಷವಾಗಿ ಲೆಕ್ಕ ಪರಿಶೋಧನೆ ಮಾಡಿ ಬಿ.ವಿ.ಆನಂದ್‌ರವರ ಮೇಲೆ ಹಾಗೂ ಜಿ,.ಮಂಜುನಾಥ್‌ರವರ ಮೇಲೆ ರೂ.2,20,137/- ಗಳ ವ್ಯತ್ಯಾಸವನ್ನು ತೋರಿಸಿರುತ್ತಾರೆ. ಬಿ.ವಿ.ಆನಂದ ಮತ್ತು ಮಂಜುನಾಥ ಇವರು ಸೇರಿ ಗೊಬ್ಬರ ಮಾರಾಟದಿಂದ ಬಂದಂತಹ ಹಣವನ್ನು ಸ್ವಂತಕ್ಕೆ ಬಳಸಿ ಆರ್ಥಿಕ ನಷ್ಟ ಉಂಟುಮಾಡಿರುತ್ತಾರೆ. ಲೆಕ್ಕ ಪರಿಶೋಧನಾಧಿಕಾರಿಗಳಿಗೆ ಲಂಚವನ್ನು ನೀಡಿ ಲೆಕ್ಕ ಪರಿಶೋಧನಾ ವರದಿಯನ್ನು ಮಾಡಿಸಿರುತ್ತಾರೆ. ಆದ್ದರಿಂದ, ಬಾವಿಕೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಲೆಕ್ಕವನ್ನು ಪರಿಶೀಲಿಸಿ ಸಂಸ್ಥೆಗೆ ಆಗಿರುವ ನಷ್ಟವನ್ನು ಸಂಬಂಧಪಟ್ಟವರಿಂದ ವಸೂಲಾತಿ ಮಾಡಿ ತಪ್ಪಿತಸ್ಥರನ್ನು ಸೇವೆಯಿಂದ ವಜಾ ಮಾಡಬೇಕೆಂದು ಕೋರಿರುತ್ತಾರೆ.

5) ದೂರುದಾರರು ತನ್ನ ಪ್ರತ್ಯುತ್ತರದ ಜೊತೆ ದಾಖಲಾತಿಗಳನ್ನು ಹಾಜರು ಪಡಿಸಿರುತ್ತಾರೆ. ದಿ.21/3/12 ರಂದು ನಡೆದಿರುವ ಕಾರ್ಯಕಾರಿ ಸಮಿತಿಯ ಸಭೆಯ ನಡವಳಿ ಪತ್ರಿಯನ್ನು ಪರಿಶೀಲಿಸಿದಾಗ, ಆಡಳಿತ ಮಂಡಳಿ ಗೋದಾಮಿನಲ್ಲಿರುವ ರಸಗೊಬ್ಬರದ ಭೌತಿಕ ದಾಸ್ತಾನು ಪರಿಶೀಲಿಸಿದ ಸಂದರ್ಭದಲ್ಲಿ ರೂ.ಒಂದು ಲಕ್ಷ ವ್ಯತ್ಯಾಸ ಕಂಡುಬಂದಿರುವ ಬಗ್ಗೆ ನಡವಳಿಯಲ್ಲಿ

ನಮೂದಾಗಿರುವುದು ಕಂಡುಬರುತ್ತದೆ. ಮೇಲ್ವಿಚಾರಕರು ಚಿಕ್ಕಮಗಳೂರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ, ತರೀಕೆರೆ ಇವರು ನೀಡಿರುವ ಅಂತಿಮ ಷರಾವನ್ನು ಪರಿಶೀಲಿಸಿದಾಗ, ಒಟ್ಟು 28 ಸ್ವಸಹಾಯ ಗುಂಪುಗಳಿಗೆ ಸಂಬಂಧಿಸಿದ ಠೇವಣಿ ಹಣವನ್ನು ಸ್ವಂತಕ್ಕೆ ಬಳಸಿಕೊಂಡಿರುವುದು, ಠೇವಣಿಯಲ್ಲಿ ಅವ್ಯವಹಾರಗಳು ಕಂಡುಬಂದಿರುವುದು. ಸಂಘದ ಸಿ.ಇ.ಓ.ರವರು ಸಿಬ್ಬಂದಿಗಳ ಮೇಲೆ ಸೂಕ್ತ ಮೇಲುಸ್ತುವಾರಿ ವಹಿಸದೆ ಪೂರ್ಣ ಜವಾಬ್ದಾರಿಯನ್ನು ಅವರಿಗೆ ವಹಿಸಿರುವುದು ಲೋಪಗಳಿಗೆ ಕಾರಣವಾಗಿರುತ್ತದೆ. ಪಿಗ್ಮಿ ಠೇವಣಿದಾರರಿಗೆ ಖಾತೆ ತೆರೆಯುವಾಗ ಅರ್ಜಿ ಫಾರಂನಲ್ಲಿ ಪಡೆಯದಿರುವುದು ಆಶ್ಚರ್ಯಕರವಾಗಿದೆ. ಠೇವಣಿದಾರರ ವಿವರ, ವಿಳಾಸ, ನಾಮಿನಿ ಹಾಗೂ ಮಾದರಿ ಸಹಿಗಳ ನಿರ್ವಹಣೆ ತೀರಾ ಬೇಜವಾಬ್ದಾರಿಯಾಗಿರುತ್ತದೆ. ಈ ಎಲ್ಲಾ ವಿಚಾರಗಳ ಬಗ್ಗೆ ಮೇಲ್ವಿಚಾರಕರು ಅಂತಿಮ ಷರಾದಲ್ಲಿ ನಮೂದು ಮಾಡಿರುವುದು ಕಂಡುಬರುತ್ತದೆ.

6) ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯನ್ನು ಪರಿಶೀಲಿಸಿದಾಗ, ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿರುವುದನ್ನು ಅವರು ಒಪ್ಪಿಕೊಂಡಿರುವುದು ಕಂಡುಬರುತ್ತದೆ. ಅಲ್ಲದೆ ರಸೀದಿ ಪುಸ್ತಕಗಳು ಕಳೆದುಹೋಗಿದ್ದರಿಂದ, ಲೆಕ್ಕ ಪರಿಶೋಧನಾ ಸಮಯದಲ್ಲಿ ಅವುಗಳನ್ನು ಹಾಜರು ಪಡಿಸಲು ಆಗಿರುವುದಿಲ್ಲವೆಂದು ಹೇಳಿರುವುದು ಎದುರುದಾರರ ಕರ್ತವ್ಯ ನಿರ್ಲಕ್ಷ್ಯತೆ ಹಾಗೂ ಬೇಜವಾಬ್ದಾರಿಯನ್ನು ತೋರಿಸುತ್ತದೆ. ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ಮುಂದುವರೆದು ಸಾಲಗಾರರು ಮರುಪಾವತಿ ಮಾಡಿರುವ ಹಣವನ್ನು ಸರ್ಕಾರದಿಂದ ಸಾಲಾ ಮನ್ನಾ ಆಗುವ ಸಾಧ್ಯತೆಗಳಿರುವ ಕಾರಣ ಸಂಘಕ್ಕೆ ಜಮಾ ಆಗುವುದನ್ನು ತಡೆಹಿಡಿಯಲಾಗಿದೆ ಎಂದು ತಿಳಿಸಿದ್ದು, ಆ ರೀತಿ ತಡೆಹಿಡಿಯಲು ಅವಕಾಶಗಳಿಲ್ಲ. ಸಾಲಗಾರರ ಕೋರಿಕೆಯಂತೆ ಜಮಾವನ್ನು ತಡೆಹಿಡಿದಿರುವುದು ಎದುರುದಾರರ ಕರ್ತವ್ಯಲೋಪವನ್ನು ತೋರಿಸುತ್ತದೆ. ರಮೇಶ್ ಬಿನ್ ಬಸಪ್ಪ, ಶ್ರೀಮತಿ.ಸಾಕಮ್ಮ ಕೋಂ ಬಸಪ್ಪ ಮತ್ತು ಶ್ರೀ.ಹೆಚ್.ಚಂದ್ರಪ್ಪ ಬಿನ್ ಹನುಮಂತಪ್ಪತರೀಕೆರೆ ಇವರ ಪ್ರಕರಣಗಳಿಗೆ ಸಂಬಂಧಪಟ್ಟಂತೆ 2015-16ನೇ ಸಾಲಿನಲ್ಲಿ ಆಡಳಿತ ಮಂಡಳಿಯವರು ದಿ.10/1/16 ರೀಮದ 14/1/16 ರವರೆಗೆ ಎದುರುದಾರರನ್ನು ಅಮಾನತ್ತು ಮಾಡಿರುವ ವಿಚಾರವನ್ನು ಹಾಗೂ ಮುಂದಕ್ಕೆ ಅಂತಹ ತಪ್ಪು ಮಾಡುವುದಿಲ್ಲವೆಂದು ಎದುರುದಾರರು ಮುಚ್ಚಳಿಕೆ ಬರೆದುಕೊಟ್ಟಿರುವ ವಿಚಾರವನ್ನು ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ತಿಳಿಸಿದ್ದು, ಅದನ್ನು ಪರಿಶೀಲಿಸಿದಾಗ, ಎದುರುದಾರರು ಕರ್ತವ್ಯಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

7) ಮೇಲಿನ ಅಂಶಗಳನ್ನು ಗಮನಿಸಿದಾಗ, ಎದುರುದಾರರು ಕರ್ತವ್ಯದಲ್ಲಿ ನಿರ್ಲಕ್ಷ್ಯವನ್ನು ತೋರಿಸಿರುವುದು, ಬೇಜವಾಬ್ದಾರಿಯಿಂದ ವರ್ತಿಸಿರುವುದು ಹಾಗೂ ಕೆಲವು ಅವ್ಯವಹಾರಗಳನ್ನು ನಡೆಸಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆ.

8) ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966 ರ ನಿಯಮ 3(1)(ii) ಮತ್ತು (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ,

ಅವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14–ಎ ರ ಅಡಿಯಲ್ಲಿ, ಎದುರುದಾರರ ವಿರುದ್ಧ ವಿಚಾರಣೆ ನಡೆಸಲು, ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

9) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕ್ರಮ ಕೈಗೊಂಡು ಅಥವಾ ಕೈಗೊಳ್ಳಬಹುದಾದ ಕ್ರಮವನ್ನು ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲೂ ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 30/8/17.

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು–2,
ಕರ್ನಾಟಕ ರಾಜ್ಯ, ಬೆಂಗಳೂರು.